ದಿಃ 06.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1** ನೇ ಎದುರುದಾರರ ಪರವಾಗಿ ಶ್ರೀ ಎಂ.ಜಿ.ಸಿ.ಯವರಿಂದಃ

ನಾವು ನೋಟೀಸನ್ನು ಪಡೆದುಕೊಂಡಿದ್ದೇವೆ. ಸದರಿ ಆಸ್ತಿಯ ಪರಿಶೀಲನೆಗಾಗಿ ಎಸ್.ಎಲ್.ಎ.ಓ, ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ್ದಾರೆ. ಅದೇ ರೀತಿ ಮನೆಯಲ್ಲಿ ಎಷ್ಟು ವಿಸ್ತೀರ್ಣ, ಎಷ್ಟು ಕೊಠಡಿಗಳು ಹಾಗೂ ಯಾವ ವಸ್ತುವಿನಿಂದ ಕಟ್ಟಲಾಗಿದೆ ಎಂದು ದಾಖಲಿಸಿಕೊಂಡಿದ್ದಾರೆ. ಸದರಿ ನಮ್ಮ ಆಸ್ತಿಯ ವಿವರದ ಅನ್ವಯ ಪರಿಹಾರ ಸೂಕ್ತವಾಗಿ ನಿಗಧಿ ಮಾಡಿದ್ದಾರೆ ಎಂದರೆ ಇಲ್ಲ. ಸೂಕ್ತ ಪರಿಹಾರ ನೀಡಿಲ್ಲ ಎಂದು ಅರ್ಜಿ ನೀಡಿದ್ದೀರಾ ಎಂದರೆ ಪ್ರತ್ಯೇಕವಾಗಿ ಈ ಅರ್ಜಿ ಹೊರತು ಮಾಡಿಲ್ಲ. ನಾನು ಆಗಿನ ಕಾಲಕ್ಕೆ ಸಿಮೆಂಟ, ಉಕ್ಕು ಹಾಗೂ ಕಟ್ಟಡದ ಖರ್ಚುವೆಚ್ಚದ ಕುರಿತು ಲೆಕ್ಕಪತ್ರ ದಾಖಲಿಸಿದ್ದೇನಾ ಎಂದರೆ ಇಲ್ಲ. ಸದರಿ ಕಟ್ಟಿಗೆ, ಅನಗವಾಡಿಯಿಂದ ಕಲ್ಲು ತರಸಿಕೊಂಡ ಬಗ್ಗೆ ಈಗ ದಾಖಲೆ ನೀಡಿಲ್ಲ. ನನ್ನ ಕಟ್ಟಡದ ಹಾಗೂ ಜಾಗದ ನನ್ನ ಅರ್ಜಿಯಲ್ಲಿ ಕೋರಿದಂತೆ ಕೋಟಿಗಟ್ಟಲೆ ಬೆಲೆ ಬಾಳುವ ಬಗ್ಗೆ ಮೌಲ್ಯಮಾಪನ ಮಾಡಿಸಿ ಸಲ್ಲಿಸಿದ್ದೇನಾ ಎಂದರೆ ಇಲ್ಲ. ನಾನು ನ್ಯಾಯಾಲಯದ ಮುಂದೆ ಇಟ್ಟಿರುವ ಖರೀದಿ ಪತ್ರಗಳನ್ನು ಉಲ್ಲೇಖಿಸಬಲ್ಲೆನಾ ಎಂದರೆ ಇಲ್ಲ. ನಾನು ಮ್ಯೂಟೇಶನ ದಾಖಲೆಗಳನ್ನು ಆ ಕುರಿತು ಹಾಜರು ಮಾಡಿದ್ದೇನಾ ಎಂದರೆ ಇಲ್ಲ. ಸದರಿ ಎಲ್.ಎ.ಸಿ ತೀರ್ಪುಗಳನ್ನು ನಾನು ಇಟ್ಟಿದ್ದು ಅದು ಯಾರದ್ದು ಯಾವ ಆಸ್ತಿಗೆ ಸಂಬಂಧಪಟ್ಟಿದ್ದು ಎಂದು ವಿವರಿಸಬಹುದೇ ಎಂದರೆ ಬಾಯಲ್ಲಿ ಹೇಳಲಾರೆ. ಪ್ರಕರಣಕ್ಕಾಗಿ ಖರೀದಿ ಪತ್ರಗಳನ್ನು ತೋರಿಕೆಗಾಗಿ ಸಲ್ಲಿಸಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ. ನಾನು ಇಟ್ಟಿರುವ ಖರೀದಿ ಪತ್ರಗಳು ನನ್ನ ಆಸ್ತಿಗೆ ಸಮೀಪದ್ದಲ್ಲ ಹಾಗೂ ಯಾವುದೇ ರೀತಿ ತಾಳೆ ಮಾಡಲಾಗುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನನ್ನ ಅರ್ಜಿ ಅಸಮಂಜಸವಾಗಿದೆ ಎಂದು ಸೂಚಿಸಿದರೆ ಸರಿಯಲ್ಲ. ಸದರಿ ಸರಕಾರದಿಂದ ನಮಗೆ ಬದಲಿ ಎರಡಷ್ಟು ಅಳತೆಯ ಪ್ಲಾಟ ನೀಡುತ್ತಾರೆ ಹಾಗೂ ವಯಸ್ಕ ಮಕ್ಕಳಿಗೆ ಆ ಕುರಿತು ಎರಡು ಪ್ಲಾಟ ನೀಡುತ್ತಾರೆ ಎಂದರೆ ಕಾನೂನಿನಲ್ಲಿ ಅವಕಾಶ ಇದೆ ಆದರೆ ಕೈಗೆ ಏನು ಇಲ್ಲ. ಅದೇ ರೀತಿ 35 ವರ್ಷ ಮೀರಿರುವ ಮದುವೆಯಾಗದ ಹೆಣ್ಣು ಮಕ್ಕಳಿಗೆ ಸಹ ಒಂದು ಪ್ಲಾಟ ನೀಡುತ್ತಾರೆ ಎಂದರೆ ನೀಡುವ ಅವಕಾಶ ಇದೆ. ಈಗಾಗಲೇ ಬಾಗಲಕೋಟೆಯಲ್ಲಿ

ನನ್ನಂತೆ ಮನೆ ಕಳೆದುಕೊಂಡು ವ್ಯಕ್ತಿಗಳಿಗೆ ಇದೇ ಮಾದರಿಯಲ್ಲಿ ನಿವೇಶನಗಳನ್ನು ಕೊಡಲಾಗಿದೆ ಎಂದರೆ ಹೌದು. ನಮ್ಮ ಆಸ್ತಿಗೆ ಸಮಪರ್ಕವಾದ ಬೆಲೆ ನಿರ್ಧರಣೆ ಮಾಡಲಾಗಿದೆ ಎಂದು ಸೂಚಿಸಿದರೆ ಸರಿಯಲ್ಲ. ನಾನು ಹೆಚ್ಚುವರಿ ಪರಿಹಾರ ಕೇಳುವ ಅವಕಾಶವೇ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3 ನೇ ಎದುರುದಾರರ ಪರವಾಗಿ ಶ್ರೀ ಆರ್.ಟಿ.ಹೆಚ್. ವಕೀಲರಿಂದಃ

ಸದರಿ ನೋಟೀಸ ನೀಡಿದ್ದ ತಾರೀಖು ಬಾಯಲ್ಲಿ ಹೇಳಲಾರೆ. ವ್ಯಾಲೂವೇಶನ್‌ಗೆ 2014 ರಲ್ಲಿ ಬಂದಿದ್ದರು. ನಾನು ನ್ಯಾಯಾಲಯದ ಮುಂದೆ ಇಟ್ಟಿರುವ ಕ್ರಯಪತ್ರಗಳು ಯಾವ ವರ್ಷದ್ದು ಎಂದರೆ ದಾಖಲೆ ನೋಡದೆ ಹೇಳಲಾರೆ. ಸದರಿ ಕ್ರಯಪತ್ರಗಳ ದೃಢಿಕೃತ ನಕಲನ್ನು ನಾನು ಯಾವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು. ಶಪಥಪತ್ರವನ್ನು ತಯಾರು ಮಾಡಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ನನ್ನ ಗಂಡ ಕೊಟ್ಟಿದ್ದಾರೆ. ಕ್ರಯಪತ್ರದಲ್ಲಿ ಕಂಡು ಬರುವ ಆಸ್ತಿಗಳು ನಮ್ಮ ಆಸ್ತಿ ಒಂದಕ್ಕೊಂದು ಹೊಂದಾಣಿಕೆ ಆಗುವುದಿಲ್ಲ ಎಂದರೆ ಸರಿಯಲ್ಲ. ಸರಕಾರ ಕಾಯ್ದೆ ಅನ್ವಯ ಪರಿಹಾರ ನೀಡಿದ್ದು ಉಪರಿ ಪರಿಹಾರ ಪಡೆಯಲು ಅವಕಾಶವೇ ಇಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಐತೀರ್ಪು ಹಾಲಿ ಭೂ ಕಾಯ್ದೆ ಅನ್ವಯ ಪಾಲನೆ ಮಾಡಲು ಬರುವುದೇ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.